

# ರಷ್ಯನ್ನರ ಕ್ರಿಸ್‌ಮಸ್

ಪ್ರಪಂಚದ ಇತರೇ ದೇಶಗಳಿಗೆ ಹೋಲಿಸಿದರೆ ರಷ್ಯಾ ದೇಶದಲ್ಲಿನ ಕ್ರಿಸ್‌ಮಸ್ ಆಚರಣೆ ಸಂಪೂರ್ಣ ವಿಭಿನ್ನ. ಇತರೆಡೆಯಲ್ಲಿ ಡಿಸೆಂಬರ್ 25 ರಂದು ಕ್ರಿಸ್ಮಸ್ ಹಬ್ಬವನ್ನು ಆಚರಿಸಿದರೆ ರಷ್ಯಾದಲ್ಲಿ ಮಾತ್ರ ಜನವರಿ 7 ರಂದು ಆಚರಿಸಲಾಗುತ್ತದೆ. ಏಕೆಂದರೆ ರಷ್ಯನ್ ಆರ್ಥಡಾಕ್ಸ್ ಚರ್ಚ್‌ನಲ್ಲಿ ಹಳೆಯ ಜೂಲಿಯನ್ ಕ್ಯಾಲೆಂಡರ್ ಅನುಸಾರವಾಗಿ ಧಾರ್ಮಿಕ ಹಬ್ಬಗಳ ಆಚರಣೆ ನಡೆಯುತ್ತದೆ. ಹಲವಾರು ಸಂಪ್ರದಾಯಸ್ಥ ಕ್ರಿಶ್ಚಿಯನ್ನರು ಕ್ರಿಸ್‌ಮಸ್ ಹಬ್ಬಕ್ಕೂ ಮುನ್ನ 40 ದಿನಗಳ ಕಾಲ ಮೀನು, ಮಾಂಸಗಳನ್ನು ಮುಟ್ಟದೆ ವ್ರತಾಚರಣೆ ನಡೆಸುತ್ತಾರೆ. ಇದು ಅಂತ್ಯಗೊಳ್ಳುವುದು ಜನವರಿ 6 ರ ರಾತ್ರಿ ಮೊದಲ ನಕ್ಷತ್ರ ಬಾನಿನಲ್ಲಿ ಮೂಡಿದಾಗ.

ಅಂದು ಕ್ರಿಶ್ಚಿಯನ್ನರು ಚರ್ಚ್‌ಗೆ ತೆರಳಿ ಪ್ರಾರ್ಥನೆ ಸಲ್ಲಿಸುತ್ತಾರೆ ಹಾಗೂ ಕುಟುಂಬ ಹಾಗೂ ಸ್ನೇಹಿತರೊಂದಿಗೆ ಹಬ್ಬದಡುಗೆಯನ್ನು ಸವಿಯುತ್ತಾರೆ. ಬೇರೆ ದೇಶಗಳಿಗಿಂತ ಇಲ್ಲಿ ಕ್ರಿಸ್‌ಮಸ್ ಹಬ್ಬವು ವ್ಯತ್ಯಾಸವಾಗಿದ್ದು 1917 ರಲ್ಲಿ ನಡೆದ ರಷ್ಯಾ ಕ್ರಾಂತಿಯ ನಂತರ. ಇತ್ತೀಚೆಗೆ ಕ್ರಿಸ್‌ಮಸ್ ಆಚರಣೆ ಜನಪ್ರಿಯತೆ ಗಳಿಸಿಕೊಂಡಿದ್ದರೂ ಕೆಲವೊಮ್ಮೆ ಕ್ರಿಸ್‌ಮಸ್‌ಗಿಂತ ಹೊಸ ವರ್ಷಾಚರಣೆಯೇ ರಷ್ಯನ್ನರಿಗೆ ಹೆಚ್ಚಿನ ಮಹತ್ವದೇನೋ ಎನ್ನಿಸುತ್ತದೆ.

ಈ ದೇಶದಲ್ಲಿ ಅಧಿಕೃತ ಕ್ರಿಸ್‌ಮಸ್ ರಜೆ ಪ್ರಾರಂಭವಾಗುವುದು ಡಿಸೆಂಬರ್ 31 ರಿಂದ ಜನವರಿ 10 ರವರೆಗೆ. ಚುಮು ಚುಮು ಚಳಿಯ ಈ ದಿನಗಳಲ್ಲಿ ರಷ್ಯಾದ ನಗರ, ಪಟ್ಟಣಗಳಲ್ಲಿರುವ ಕಟ್ಟಡಗಳು, ಮರಗಳು, ರಸ್ತೆಗಳೆಲ್ಲವೂ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಜಗಮಗಿಸುತ್ತಾ ಗಂಧರ್ವ ಮಾಯಾಲೋಕವೇ ಭುವಿಯಲ್ಲಿದೆಯೇನೋ ಎಂಬಂತೆ ಭಾಸವಾಗುತ್ತದೆ.

■ ಪ್ರಿಯಾಂಕ ವಿ.ಹೆಚ್.